ದಿನಾಂಕ **20.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟಿ ಸವಾಲು ಃ ಅರ್ಜಿದಾರರ ಪರ ವಕೀಲರಿಂದ

ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಪಟ್ಟಣದಲ್ಲಿ ಕಟಿಂಗ್ ಅಂಗಡಿ ಇಟ್ಟುಕೊಂಡಿದ್ದೇನೆ. ಅ ಅಂಗಡಿ ಬಾಡಿಗೆಗೆ ಇರುತ್ತದೆ. ಆ ಅಂಗಡಿಗೆ ತಿಂಗಳಿಗೆ 6 ಸಾವಿರ ಬಾಡಿಗೆ ಕೊಡುತ್ತೇನೆ. ಖರ್ಚು ವೆಚ್ಚ ಕಳೆದು ನನಗೆ ದಿನಕ್ಕೆ 200 ರಿಂದ 300 ರೂ ಹಣ ಉಳಿಯುತ್ತದೆ ಎಂದರೆ ಸರಿಯಲ್ಲ. 4-5 ಸಾವಿರ ಉಳಿಯುತ್ತದೆ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ. ನನ್ನ ಅಂಗಡಿಯಲ್ಲಿ 4 ಜನ ಕೆಲಸ ಮಾಡುತ್ತಾರೆ. ನಾನು ಕೆಲಸಗಾರರನ್ನು ನೊಂದಣಿ ಮಾಡಿರುತ್ತೇನೆ. ನನ್ನ ಅದಾಯದ ಬಗ್ಗೆ ತೆರಿಗೆ ಇಲಾಖೆಗೆ returns ಸಲ್ಲಿಸಿಲ್ಲ. ಅರ್ಜಿದಾರರು ಗಾಯಿತ್ರಿ ಬಡಾವಣೆಯಲ್ಲಿ ಕೆನ್ನಾಳ್ ಪ್ರಾವಿಜನ್ ಸ್ಟೋರ್ ಹತ್ತಿರ ವಾರ್ಡ್ ನಂ. 10 ರಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಿಪಿ 4 ರಿಂದ 8 ದಾಖಲಾತಿಗಳು ಸರಿ ಇರುತ್ತವೆ. ನಾನು ಹೇಳಿದ ರೀತಿಯಲ್ಲಿ ಅರ್ಜಿದಾರರು ಜ್ಞಾನ ಸಾಗರ ಶಾಲೆ ಹತ್ತಿರ ವಾಸವಾಗಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ 5 ಲಕ್ಷ ಹಣವನ್ನು ನನ್ನ ಸಂಪಾದನೆಯಲ್ಲಿ ಇಟ್ಟುಕೊಂಡಿದ್ದೆ. 20 ಸಾವಿರಕ್ಕಿಂತ ಹೆಚ್ಚು ವ್ಯವಹಾರ ಮಾಡುವುದಾದರೆ ಚೆಕ್ ಮೂಲಕ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ಹಣವನ್ನು ಚೆಕ್ ಮೂಲಕ ಪಾವತಿ ಮಾಡಿಲ್ಲ. ನಾನು ಆದಾಯ ತೆರಿಗೆ ಇಲಾಖೆಗೆ ವರದಿ ನೀಡಿಲ್ಲ. ನನಗೆ ಬರುವ ಆದಾಯ ನನ್ನ ಜೀವನಕ್ಕೆ ಸಾಕಾಗುವುದಿಲ್ಲ ಎಂದರೆ ಸರಿಯಲ್ಲ. 2018 ರಿಂದ 2023 ರವರೆಗೆ ಅರ್ಜಿದಾರರಿಗೆ ಯಾವುದೇ ಆದಾಯ ಇಲ್ಲದ ಕಾರಣ ಬರಗಾಲದಲ್ಲಿ ಕೂಲಿ ಕೆಲಸಕ್ಕೆ ಬೇರೆ ಊರಿಗೆ ಹೋಗಿದ್ದರು ಎಂದರೆ ಸರಿಯಲ್ಲ. ಬೆಂಗಳೂರಿನ ಮಾಚೊಹಳ್ಳಿ ಗ್ರಾಮದಲ್ಲಿ ಕೂಲಿ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸರಿಯಲ್ಲ. ಸುಳ್ಳು ವಿಳಾಸವನ್ನು ನೀಡಿ ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾವೆಯಲ್ಲಿ ಅರ್ಜಿದಾರರಿಗೆ ಯಾವುದೇ ನೋಟಿಸ್ ಜಾರಿ ಆಗಿಲ್ಲ ಎಂದರೆ

ಸರಿಯಲ್ಲ. ನೋಟಿಸ್ ಜಾರಿ ಆಗಿದೆ ಎಂದು ಸುಳ್ಳು ಷರಾ ಬೆರಸಿರುತ್ತೇನೆ ಎಂದರೆ ಸರಿಯಲ್ಲ. ಬೆಂಗಳೂರಿನಿಂದ ಬಂದ ನಂತರ ಜಾರಿ ಸಂಖ್ಯೆ 10/2018 ರಲ್ಲಿ ಟಾಂ ಟಾಂ ಮಾಡಿದಾಗ ಅಕ್ಕಪಕ್ಕದವರು ತಿಳಿಸಿದ ಕಾರಣ ವಾದಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅದುವರೆವಿಗೂ ನಾನು ದಾವೆ ಸಲ್ಲಿಸಿದ ವಿಚಾರ ಅರ್ಜಿದಾರರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯರು ಗಾಯಿತ್ರಿ ಬಡಾವಣೆಯ ಕೆನ್ನಾಳ್ ಪ್ರಾವಿಜನ್ ಸ್ಟೋರ್ ಹತ್ತಿರ ವಾರ್ಡ್ ನಂ. 10 ರಲ್ಲಿ ವಾಸವಾಗಿದ್ದರು ಸಹ ಸುಳ್ಳು ವಿಳಾಸ ನೀಡಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಮಾಹಿತಿ ನೀಡಿ ನಾನು ದಾವೆಯಲ್ಲಿ ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ನೋಟಿಸ್ ಜಾರಿಯಾಗದ ಕಾರಣ ವಾದಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.